ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರಕನ್ನಡ, ಕಾರವಾರ-581 301
OFFICE OF THE DEPUTY COMMISSIONER, UTTARA KANNADA DISTRICT, KARWAR, -581 301
ದೂರವಾಣಿ : 08382 226406, 226471 Email: dckarwar@gmail.com
Telephone: 08382 226603 (Fax) Website: http://uttara.kannada.nic.in

ನಂ/ಕಂಶಾ/ಅರಣ್ಯ/ವಿವ/1 /2019-20 ದಿನಾಂಕ: 13-06-2019

1)ಉಪ ಅರಣ್ಯ ಸಂರಕ್ಷಣಾಧಿಕಾರಿ
ಕಾರವಾರ ವಿಭಾಗ ಕಾರವಾರ
2) ಉಪ ಅರಣ್ಯ ಸಂರಕ್ಷಣಾಧಿಕಾರಿ
ಹೊನ್ನಾವರ ವಿಭಾಗ ಹೊನ್ನಾವರ

ಮಾನ್ಯರೇ,

ವಿಷಯ: ಅಂಕೋಲಾ ತಾಲೂಕಿನ ಅಗಸೂರ ಮತ್ತು ಗುಂಡಬಾಳ ಗ್ರಾಮದಲ್ಲಿ ಗಂಗಾವಳಿ ನದಿಗೆ ಅಡ್ಡಲಾಗಿ ಕಿಂಡಿ ಆಣೆಕಟ್ಟು ನಿರ್ಮಾಣಕ್ಕಾಗಿ 35 ಹೆಕ್ಟರ್ ಅರಣ್ಯ ಜಮೀನನ್ನು ಅವಶ್ಯಕತೆ ಇದ್ದು ಸದರಿ ಜಮೀನಿನ ಬದಲಾಗಿ ಸರಕಾರಿ ಪಡ ಜಮೀನು ಅರಣ್ಯ ಇಲಾಖೆಗೆ ಪರ್ಯಾಯವಾಗಿ ಹಸ್ತಾಂತರಿಸುವ ಕುರಿತು.

ಉಲ್ಲೇಖ: 1)ಕಾರ್ಯಪಾಲಕ ಅಭಿಯಂತರರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರವಾರ ರವರ ಪತ್ರ ದಿನಾಂಕ: 19-02-2019. ಸ್ವೀಕೃತಿ ದಿನಾಂಕ: 31-5-20019.
2) ಸಹಾಯಕ ಕಮೀಷನರ್ ಕಾರವಾರ ರವರ ವರದಿ ನಂ. ಭೂಸ್ವಾ/ವಿವ-14/2000-01 ದಿನಾಂಕ: 7-6-2019. ಸ್ವೀಕೃತಿ ದಿನಾಂಕ: 13-6-2019.
3)ಸರ್ಕಾರದ ಆದೇಶ ನಂ. ಆರ್.ಡಿ/42/ಎಕ್ಯೂಎನ್/2004 ದಿ: 10-02-2004.
4)ಸಹಾಯಕ ಕಮೀಷನರ್ ಮತ್ತು ಭೂಸ್ವಾಧಿನ ಅಧಿಕಾರಿ ಕಾರವಾರ ಉಪವಿಭಾಗ ಕಾರವಾರ ರವರ ಹೈತೀರ್ಪು ನಂ. ಭೂಸ್ವಾ/ವಿವ/14/2000-01 ದಿ: 13-04-2006.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರವಾರವರು ಕಾರವಾರ ಮತ್ತು ಅಂಕೋಲಾ ಪಟ್ಟಣದ ಮಾರ್ಗ ಮಧ್ಯ ಹಳ್ಳಿಗಳು ಮತ್ತು ಸೀಬರ್ಡ ಯೋಜನೆಗಳಿಗೆ ನೀರು ಸರಬರಾಜು ಮಾಡಲು ಗಂಗಾವಳಿ ನದಿಗೆ ಅಡ್ಡಲಾಗಿ ರೂ. 15862.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಿಂಡಿ ಆಣೆಕಟ್ಟು ನೀರ್ಮಿಸಲು ಸರ್ಕಾರದಿಂದ ಈಗಾಗಲೇ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು ಸದರಿ ಯೋಜನೆ ಅಡಿಯಲ್ಲಿ ಕಿಂಡಿ ಆಣೆಕಟ್ಟು ನಿರ್ಮಿಸಲು ಸುಮಾರು 35 ಹೆಕ್ಟರ್ ಅರಣ್ಯ ಭೂಮಿ ಅವಶ್ಯಕತೆ ಇರುತ್ತದೆ. ಈಗಾಗಲೇ ಅರಣ್ಯ ಇಲಾಖೆಗೆ ಭೂಸ್ವಾಧಿನಕ್ಕೆ ಸಂಬಂಧಿಸಿದಂತೆ Online ಮೂಲಕ ಅರ್ಜಿ ಸಲ್ಲಿಸಲಾಗಿದ್ದು, ಸದರಿ ಅರ್ಜಿಯನ್ನು ತಾಂತ್ರಿಕವಾಗಿ ಅರಣ್ಯ ಇಲಾಖೆರವರು ಪರಿಶೀಲಿಸಿದ್ದು ಅದರಂತೆ 35 ಹೆಕ್ಟರ ಅರಣ್ಯ ಭೂಮಿ ಹಾಗೂ 19 ಹೇಕ್ಟರ್ ಅರಣ್ಯೇತರ ಭೂಮಿ ಮುಳುಗಡೆಯಾಗುತ್ತಿದ್ದು ಈ ಸಂಬಂಧ 35 ಹೆಕ್ಟರ್ ಅರಣ್ಯ ಭೂಮಿ ಬದಲಾಗಿ ಸರ್ಕಾರಿ ಪಡ ಜಮೀನು ಅರಣ್ಯ ಇಲಾಖೆಗೆ ಪರ್ಯಾಯವಾಗಿ ಹಸ್ತಾಂತರಿಸಬೇಕೆಂದು ಸಿಸಿಎಫ್ ಬೆಂಗಳೂರು ರವರು ಸೂಚಿಸಿದರು. ಅದರಂತೆ ಸದರಿ ಅರಣ್ಯ ಭೂಮಿ ಬದಲಾಗಿ ಸರ್ಕಾರಿ ಜಮೀನು ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಕೋರಿ ಉಲ್ಲೇಖ (1) ರಂತೆ ಈ ಕಚೇರಿಗೆ ಪತ್ರ ಸಲ್ಲಿಸಿರುತ್ತಾರೆ.

ಸದರಿ ವಿಷಯದ ಕುರಿತು ಸಹಾಯಕ ಕಮೀಷನರ್ ಕಾರವಾರ ರವರು ವಿಚಾರಣೆ ಜರುಗಿಸಿ ವರದಿ ಸಲ್ಲಿಸಿರುತ್ತಾರೆ. ಉಲ್ಲೇಖ (4) ರ ಐತೀರ್ಪು ಪ್ರಕಾರ ಭೂಸ್ವಾಧೀನವಾದ ಒಟ್ಟೂ ಕ್ಷೇತ್ರ 168-0-0 (ಎ-ಗು-ಆ). ಖರಾಬ ಕ್ಷೇತ್ರ 3-35-0(ಎ-ಗು-ಆ) ನೇದರಲ್ಲಿ ದೇವಕಾರ ಗ್ರಾಮದ ಕ್ಷೇತ್ರ 87-20-0 (ಎ-ಗು-ಆ) ತರಿ ಹಾಗೂ ಖರಾಬ ಜಮೀನು ಮಾನ್ಯ ಸರ್ಕಾರದ ಆದೇಶದನ್ವಯ ಈಗಾಗಲೇ ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಗಿದೆ. ಪ್ರಯುಕ್ತ ದೇವಕಾರ ಗ್ರಾಮದ ಒಪ್ಪಿಗೆ ಐತೀರ್ಪು ರನ್ವಯ ಖಾಸಗಿ ಜಮೀನು ಕ್ಷೇತ್ರ 87-20-0 (ಎ-ಗು-ಆ) ವನ್ನು ಈಗಾಗಲೇ ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಗಿದ್ದರಿಂದ ಸದರಿ ಜಮೀನನ್ನು ಅಂಕೋಲಾ ತಾಲೂಕಿನ ಅಗಸೂರು ಮತ್ತು ಗುಂಡಬಾಳ ಗ್ರಾಮದ ಗಂಗಾವಳಿ ನದಿಗೆ ಅಡ್ಡಲಾಗಿ ಕಿಂಡಿ ನಿರ್ಮಾಣದ ಯೋಜನೆಗೆ ಪರ್ಯಾಯವಾಗಿ ಉಪಯೋಗಿಸಬಹುದಾಗಿದೆ ಎಂದು ವರದಿ ನೀಡಿರುತ್ತಾರೆ.

ಕಾರಣ ಸಹಾಯಕ ಕಮೀಷನರ ಕಾರವಾರ ರವರ ವರದಿ, ಐತೀರ್ಪುವನ್ನು ಪರಿಶೀಲಿಸಲಾಗಿ ದೇವಕಾರ ಗ್ರಾಮದ ಒಟ್ಟು ಜಮೀನು ಕ್ಷೇತ್ರ 168-0-0 ಪೈಕಿ ಕ್ಷೇತ್ರ 87-20-0 (ಎ-ಗು-ಆ) ವನ್ನು ಈಗಾಗಲೇ ಅರಣ್ಯ ಇಲಾಖೆಗೆ ಹಸ್ತಾಂತರಿಸುವುದರಿಂದ ಸದರಿ ಜಮೀನನ್ನು ಅಂಕೋಲಾ ತಾಲೂಕಿನ ಅಗಸೂರು ಮತ್ತು ಗುಂಡಬಾಳ ಗ್ರಾಮದಲ್ಲಿ ಗಂಗಾವಳಿ ನದಿಗೆ ಅಡ್ಡಲಾಗಿ ಆಣೆಕಟ್ಟು ನಿರ್ಮಾಣಕ್ಕಾಗಿ ನಿಯಮಾನುಸಾರ ಬಿಡುಗಡೆ ಮಾಡಲು ಕೋರಿದೆ.

ತಮ್ಮ ವಿಶ್ವಾಸಿ

ಜಿಲ್ಲಾಧಿಕಾರಿ
ಉತ್ತರಕನ್ನಡ, ಕಾರವಾರ

ಪ್ರತಿ : ಕಾರ್ಯಪಾಲಕ ಅಭಿಯಂತರರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರವಾರ ರವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.